ಇಂಗ್ಲಿಷ್ ಮೂಲ: ರೋಆಲ್ಡ್ ಡಾಲ್
**ಕನ್ನಡಕ್ಕೆ: ಜೆ.ವಿ. ಕಾರ್ಲೊ**

# ಬೆರಳು ಕಲಾವಿದ



ನಾನು ಹೊಸ ಕಾರು ಖರೀದಿಸಿದ್ದೆ. ದೈತ್ಯ ಬಿ.ಎಂ.ಡಬ್ಲ್ಯು, 3.3 ಲೀ., ಅಗಲ ವ್ಹೀಲ್ ಬೇಸ್, ಫ್ಯುಯೆಲ್ ಇಂಜೆಕ್ಷನ್ ಇತ್ಯಾದಿ. ಇದರ ಗರಿಷ್ಠ ವೇಗ ಗಂಟೆಗೆ 129 ಮೈಲುಗಳಿದ್ದು ಅತ್ಯುತ್ತಮ ಎಕ್ಸಲರೇಶನ್ ಇತ್ತು. ಕಾರಿನ ಬಣ್ಣ ಆಕಾಶ ನೀಲಿಯಾಗಿದ್ದು, ಆಸನಗಳು ಗಾಢ ನೀಲಿ ಬಣ್ಣದ ಮೃದು ಚರ್ಮದಿಂದ ತಯಾರಾಗಿದ್ದವು. ಸೆಂಟ್ರಲ್ ಲಾಕಿಂಗ್ ಸಿಸ್ಟಮ್ ಇದ್ದು, ಛಾವಣಿ ಕೂಡ ಇಳಿಸಬಹುದಾಗಿತ್ತು. ರೇಡಿಯೊ ಹಾಕುತ್ತಿದ್ದಂತೆ ಏರಿಯಲ್ ಮೇಲೇಳುತ್ತಿತ್ತು ಹಾಗೆಯೇ ಆಫ್ ಮಾಡಿದಾಗ ಒಳಗೆ ಸರಿಯುತ್ತಿತ್ತು. ಕಾರನ್ನು ಕನಿಷ್ಠ ವೇಗದಲ್ಲಿ ಓಡಿಸಿದಾಗ ಅಸಹಾಯಕ ಹುಲಿಯಂತೆ ಗರ್ಜಿಸುತ್ತಿತ್ತು. ಅರವತ್ತರ ಮೇಲೆ ತೃಪ್ತಿಯ ಸದ್ದು ಹೊರಡಿಸುತ್ತಿತ್ತು. ಅಂದು ಜೂನ್ ತಿಂಗಳ ಒಂದು ಸುಂದರ ದಿನ. ನಾನು ಒಬ್ಬನೇ ಲಂಡನ್ ಕಡೆಗೆ ಹೊರಟಿದ್ದೆ. ಹೊರಗೆ ಹೊಲಗಳಲ್ಲಿ ರೈತರು ಕೆಲಸ ಶುರು ಮಾಡಿದ್ದರು. ರಸ್ತೆಯ ಇಕ್ಕೆಲಗಳಲ್ಲೂ ಹಳದಿ ಕಾಡು ಬಟರ್ ಕಪ್ ಹೂಗಳು ಗಾಳಿಗೆ ತೊನೆದಾಡುತ್ತಿದ್ದವು. ನಾನು ಆರಾಮವಾಗಿ ಹಿಂದಕ್ಕೆ ಒರಗಿಕೊಂಡು ಎರಡೇ ಬೆರಳುಗಳಲ್ಲಿ ಸ್ಟಿಯರಿಂಗನ್ನು ನಿಯಂತ್ರಿಸುತ್ತಾ ಯಾವುದೇ ಅವಸರವಿಲ್ಲದೆ